# ಕರ್ನಾಟಕ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಅಧಿನಿಯಮ, 1985

(ಕರ್ನಾಟಕ ರಾಜ್ಯಪತ್ರ, ಗುರುವಾರ ಮೇ 15, 2003 ಭಾಗ–4ಎ ಪುಟ 469 ರಿಂದ 474ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕಾರ್ಯ ನಿರ್ವಾಹಕ ಪ್ರಾಧಿಕಾರಿಗಳು, ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು
4. ಸರ್ಕಾರದಿಂದ ಪಟ್ಟಿಯ ಅನುಮೋದನೆ
5. ಹೊಸ ಜಮೀನುಗಳ ಸೇರ್ಪಡೆ
6. ಕೆಲವು ಸಂದರ್ಭಗಳಲ್ಲಿ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಬಳಕೆಯ ನಿಷೇಧ
7. ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ನಿರ್ವಹಣೆ
8. ಕಟ್ಟಡಗಳ ನಿರ್ಮಾಣ, ಇತ್ಯಾದಿಗಳ ನಿಷೇಧ
9. ಉದ್ಯಾನವನಗಳ ಮತ್ತು ಆಟದ ಮೈದಾನಗಳ ಮಾಲೀಕರ ಕರ್ತವ್ಯ
10. ವಾರ್ಷಿಕ ವಿವರ ಪಟ್ಟಿಯ ಸಲ್ಲಿಕೆ
11. ದಂಡಗಳು
12. ಕಂಪನಿಗಳಿಂದ ಅಪರಾಧಗಳು
13. ನಿಯಂತ್ರಣ
14. ನಿಯಮ ರಚನಾಧಿಕಾರ
15. ನಿರಸನ ಮತ್ತು ಉಳಿಸುವಿಕೆಗಳು

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

**1985ರ ಅಧಿನಿಯಮ 16.–** ನಗರ ಪ್ರದೇಶಗಳಲ್ಲಿ ನಿವಾಸದ ಮತ್ತು ವಾಣಿಜ್ಯದ ನಿವೇಶನಗಳಿಗೆ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸಾಕಷ್ಟು ಸಂಖ್ಯೆಯಲ್ಲಿ ಉದ್ಯಾನವನಗಳನ್ನು, ಆಟದ ಮೈದಾನಗಳನ್ನು ಮತ್ತು ಬಯಲು ಸ್ಥಳಗಳನ್ನು, ನಿವೇಶನಗಳನ್ನಾಗಿ ಮತ್ತು ಇತರ ಅಂಥ ಉಪಯೋಗಿಕ್ಕಾಗಿ ಪರಿವರ್ತನೆಗೊಳಿಸಲಾಗುತ್ತಿದೆ. ಪ್ರತಿಯೊಂದು ಸ್ಥಳೀಯ ನಿವಾಸಿಗಳ ಮನರಂಜನೆಗಾಗಿ ಅಗತ್ಯವಾದ ಸ್ಥಳವನ್ನು ಒದಗಿಸುವ ಉದ್ದೇಶದಿಂದ, ಉದ್ಯಾನ ವನಗಳನ್ನು ಆಟದ ಮೈದಾನಗಳನ್ನು ಮತ್ತು ಬಯಲು ಸ್ಥಳಗಳನ್ನು ಪರಿರಕ್ಷಿಸುವ ಮತ್ತು ಅಂಥ ಭೂಮಿಯನ್ನು ಇತರ ಉಪಯೋಗಕ್ಕೆ ಪರಿವರ್ತಿಸುವ ಪದ್ಧತಿಯನ್ನು ಕೊನೆಗಾಣಿಸುವುದು ಅಗತ್ಯವಾಗಿದೆ.

ಆದುದರಿಂದ ಈ ವಿಧೇಯಕ.

ಕರ್ನಾಟಕ ರಾಜಪತ್ರ (ವಿಶೇಷ) ಭಾಗ IV–2ಎ, ದಿನಾಂಕ 20.3.1985, ಸಂಖ್ಯೆ 154 ಆಗಿ ಪುಟ 11ರಲ್ಲಿ ಪ್ರಕಟಿಸಲಾಗಿದೆ).

* * * *

# 1985ರ ಕರ್ನಾಟಕ ಅಧಿನಿಯಮ ಸಂಖ್ಯೆ 16

(1985ರ ಮೇ ಎಂಟನೇ ದಿನದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಗಿದೆ.)

# ಕರ್ನಾಟಕ ಉದ್ಯಾನವನಗಳ, ಆಟದ ಮೈದಾನಗಳ, ಬಯಲು ಸ್ಥಳಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಅಧಿನಿಯಮ, 1985.

(1985 ರ ಮೇ 7 ರಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

**ಕರ್ನಾಟಕ ರಾಜ್ಯದಲ್ಲಿ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಸಂರಕ್ಷಣೆ ಮತ್ತು ನಿಯಂತ್ರಣವನ್ನು ಉಪಬಂಧಿಸುವ ಅಧಿನಿಯಮ.**

ಕರ್ನಾಟಕ ರಾಜ್ಯದಲ್ಲಿ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಸಂರಕ್ಷಣೆ ಮತ್ತು ನಿಯಂತ್ರಣಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯವಾದುದರಿಂದ;

ಭಾರತ ಗಣರಾಜ್ಯದ ಮೂವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಅಧಿನಿಯಮ, 1985 ಎಂದು ಕರೆಯತಕ್ಕುದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಬೆಂಗಳೂರು, ಬೆಳಗಾಂ, ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಮೈಸೂರು ನಗರದಲ್ಲಿ ಮತ್ತು ರಾಜ್ಯದಲ್ಲಿನ ನಗರ ಪುರಸಭೆಯೊಳಗೆ ಸೇರಿರುವ ಸ್ಥಳೀಯ ಪ್ರದೇಶಗಳಲ್ಲಿ 1984ರ ಡಿಸೆಂಬರ್ 26ನೇ ದಿನದಂದು ಮತ್ತು ರಾಜ್ಯದ ಇತರ ಸ್ಥಳೀಯ ಪ್ರದೇಶಗಳಲ್ಲಿ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ [1][ದಿನಾಂಕ][1]ದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು ಮತ್ತು ಯಾವುದೇ ಅಂತಹ ಅಧಿಸೂಚನೆಯನ್ನು ಸರ್ಕಾರವು ರದ್ದುಪಡಿಸಬಹುದು ಅಥವಾ ಮಾರ್ಪಾಡು ಮಾಡಬಹುದು.

1. ಅಂಥ ಅಧಿಸೂಚನೆಗಳು ಲಭ್ಯವಾಗಿಲ್ಲ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮುಖ್ಯ ನಿಯಂತ್ರಣಾಧಿಕಾರಿ" ಎಂದರೆ, ಬೆಂಗಳೂರು, ಬೆಳಗಾಂ, ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಮೈಸೂರು ನಗರಗಳ ಸಂದರ್ಭದಲ್ಲಿ ಸರ್ಕಾರ ಹಾಗೂ ಇತರ ಸಂದರ್ಭಗಳಲ್ಲಿ ಕಮಿಷನರ್;

(ಬಿ) "ಕಮಿಷನರ್" ಎಂದರೆ, ಕಂದಾಯ ವಿಭಾಗದ ವಿಭಾಗಾಧಿಕಾರಿ;

(ಸಿ) "ಕಾರ್ಯನಿರ್ವಾಹಕ ಪ್ರಾಧಿಕಾರಿ" ಎಂದರೆ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ರಚನೆಗಾಗಿ ಉಪಬಂಧ ಕಲ್ಪಿಸುವ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸಾಮಾನ್ಯ ಕಾರ್ಯನಿರ್ವಹಣಾ ಅಧಿಕಾರಗಳು ನಿಹಿತವಾಗಿರುವ ಅಂಥ ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ;

(ಡಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಇ) "ಸ್ಥಳೀಯ ಪ್ರಾಧಿಕಾರ" ಎಂದರೆ, ಪುರಸಭಾ ನಿಗಮ, ಪುರಸಭಾ ಪರಿಷತ್ತು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಸುಧಾರಣಾ ಮಂಡಳಿ, ನೈರ್ಮಲ್ಯ ಮಂಡಳಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಅಥವಾ ಮುಂದುವರಿಸಲಾದ

ಅಧಿಸೂಚಿತ ಪ್ರದೇಶ ಸಮಿತಿ ಅಥವಾ ಪಟ್ಟಣ ಮಂಡಳಿ ಮತ್ತು ಸರ್ಕಾರವು ಅಧಿಸೂಚನೆಯ ಮೂಲಕ ಸ್ಥಳೀಯ ಪ್ರಾಧಿಕಾರವೆಂದು ನಿರ್ದಿಷ್ಟಪಡಿಸಬಹುದಾದಂತಹ ಇತರ ಪ್ರಾಧಿಕಾರ;

(ಎಫ್) "ಬಯಲು ಸ್ಥಳ" ಎಂದರೆ, ಯಾವುದೇ ಕಟ್ಟಡಗಳಿಲ್ಲದ ಯಾವುದೇ ಭೂಮಿ ಅಥವಾ ಅದರ ಇಪ್ಪತ್ತನೇ ಒಂದು ಭಾಗಕ್ಕಿಂತ ಹೆಚ್ಚಿಲ್ಲದ ಭಾಗವು ಕಟ್ಟಡಗಳಿಂದ ಆವೃತವಾಗಿದ್ದು, ಇಡೀ ಭಾಗ ಅಥವಾ ಉಳಿದ ಭಾಗವು ವಿಹಾರ, ಗಾಳಿ ಅಥವಾ ಬೆಳಕಿನ ಉದ್ದೇಶಗಳಿಗಾಗಿ ಬಳಸುವ ಅಥವಾ ಅದಕ್ಕಾಗಿ ಇಟ್ಟಿರುವ ಅಥವಾ ನಾಗರೀಕ ಸೌಲಭ್ಯಗಳ ಉದ್ದೇಶಕ್ಕಾಗಿಯೇ ಇಟ್ಟಿರುವ ಯಾವುದೇ ಭೂಮಿ;

(ಜಿ) "ಉದ್ಯಾನವನ" ಎಂದರೆ, ಯಾವುದೇ ಕಟ್ಟಡಗಳಿಲ್ಲದ ಅಥವಾ ಇಪ್ಪತ್ತನೇ ಒಂದು ಭಾಗಕ್ಕಿಂತ ಹೆಚ್ಚಿಲ್ಲದ ಭಾಗವು ಕಟ್ಟಡಗಳಿಂದ ಆವೃತವಾಗಿದ್ದು, ಇಡೀ ಭಾಗ ಅಥವಾ ಉಳಿದ ಭಾಗವನ್ನು ಮರಗಳು, ಗಿಡಗಳು ಅಥವಾ ಹೂವಿನ ಹಾಸು ಅಥವಾ ಹುಲ್ಲುಹಾಸು ಅಥವಾ ಹುಲ್ಲುಗಾವಲುಗಳಿಂದ ತೋಟವನ್ನಾಗಿ ಮಾಡಿದ್ದು ಅದನ್ನು ವಿಹಾರ, ಗಾಳಿ ಅಥವಾ ಬೆಳಕಿಗಾಗಿ ಸಾರ್ವಜನಿಕ ವಿರಾಮ ಸ್ಥಳವೆಂದು ನಿರ್ವಹಣೆ ಮಾಡಲಾದ ಭೂಮಿಯ ಸ್ವಲ್ಪ ಭಾಗ;

(ಎಚ್) "ಆಟದ ಮೈದಾನ" ಎಂದರೆ, ಆಟ, ಪಂದ್ಯ ಅಥವಾ ಕ್ರೀಡೆಯ ಉದ್ದೇಶಕ್ಕಾಗಿ ಅಳವಡಿಸಿಕೊಂಡ ಮತ್ತು ಶಾಲೆಗಳು ಅಥವಾ ಕಾಲೇಜುಗಳು ಅಥವಾ ಕ್ಲಬ್‌ಗಳು ಅಥವಾ ಸಾಮಾನ್ಯ ಜನತೆಯು ಬಳಸುವ ಭೂಮಿಯ ಸ್ವಲ್ಪ ಭಾಗ ಮತ್ತು ಇದರಲ್ಲಿ ಸ್ಥಳೀಯ ಪ್ರಾಧಿಕಾರವು ಆಟದ ಬಯಲುಗಳಿಗಾಗಿಯೇ ಇಟ್ಟಿರುವ ಭೂಮಿಯು ಸೇರುತ್ತದೆ.

**3. ಕಾರ್ಯನಿರ್ವಾಹಕ ಪ್ರಾಧಿಕಾರಿಗಳು, ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು.–** (1) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದ ಕಾರ್ಯನಿರ್ವಾಹಕ ಪ್ರಾಧಿಕಾರಿಯು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಆರು ತಿಂಗಳಿಗಿಂತ ಹೆಚ್ಚು ತಡ ಮಾಡದೆ ಮೇಲೆ ಹೇಳಿದ ಪ್ರದೇಶದಲ್ಲಿ, ಎಲ್ಲ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ನಕ್ಷೆಗಳು ಮತ್ತು ಭೂಪಟಗಳು ಹಾಗೂ ಅಳತೆಗಳೊಂದಿಗೆ ಹಾಗೂ ನಿಯಮಿಸಬಹುದಾದಂತಹ ಇತರ ವಿವರಗಳನ್ನು ಒಳಗೊಂಡ ಒಂದು ಸರಿಯಾದ ಪೂರ್ಣಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

2. ಸರ್ಕಾರವು, (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಪಟ್ಟಿ ಮತ್ತು ಇತರ ದಸ್ತಾವೇಜುಗಳನ್ನು ಸ್ವೀಕರಿಸಿದ ನಂತರ, ಸಾಧ್ಯವಾದಷ್ಟು ಬೇಗನೆ, ಅದಕ್ಕೆ ಸಂಬಂಧಪಟ್ಟ ನಿವೇದನೆಯನ್ನು ನಿಯಮಿತ ರೀತಿಯಲ್ಲಿ ಯಾವ ದಿನಾಂಕಕ್ಕೆ (ಪ್ರಕಟಣೆಯ ದಿನಾಂಕದಿಂದ ಮೂರು ತಿಂಗಳಿಗಿಂತಲೂ ಕಡಿಮೆಯಾಗಿರದಂತೆ) ಮುಂಚೆ ಸಲ್ಲಿಸಬೇಕೆಂಬುದನ್ನು ಮೊದಲು ತಿಳಿಸುವ ನೋಟೀಸಿನ ಜೊತೆಗೆ ಪಟ್ಟಿಯನ್ನು ಪ್ರಕಟಿಸತಕ್ಕದ್ದು ಮತ್ತು ಅಂತಹ ಪ್ರಕಟಣೆಯು, ನಕ್ಷೆಗಳು, ಭೂಪಟಗಳು ಮತ್ತು ಮೇಲೆ ಹೇಳಿದ ಕಾಗದಪತ್ರಗಳು ಸಾರ್ವಜನಿಕ ಪರಿಶೀಲನೆಗಾಗಿ ಯಾವ ಸ್ಥಳದಲ್ಲಿ ಮತ್ತು ಯಾವ ವೇಳೆಯಲ್ಲಿ ದೊರೆಯುತ್ತವೆ ಎಂಬುದನ್ನು ತಿಳಿಸತಕ್ಕದ್ದು:

ಪರಂತು, ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯಾನವನಗಳ, ಆಟದ ಮೈದಾನಗಳ ಅಥವಾ ಬಯಲು ಸ್ಥಳಗಳಲ್ಲಿ ಯಾವುದಾದರೂ ಖಾಸಗಿ ಜಮೀನು ಸೇರಿದ್ದರೆ, ಸಂಬಂಧಪಟ್ಟ ನಕ್ಷೆಗಳು ಮತ್ತು ಭೂಪಟಗಳ ಪಟ್ಟಿಯ ಒಂದು ಪ್ರತಿಯನ್ನು ಆ ಖಾಸಗಿ ಜಮೀನಿನ ಮಾಲೀಕರ ಮೇಲೆ ಜಾರಿಗೊಳಿಸುವಂತೆ ಮಾಡತಕ್ಕದ್ದು.

**4. ಸರ್ಕಾರದಿಂದ ಪಟ್ಟಿಯ ಅನುಮೋದನೆ.–** (1) ಯಾರೇ ಆಸಕ್ತ ವ್ಯಕ್ತಿಯು, ಪಟ್ಟಿಯಲ್ಲಿರುವ ಯಾವುದೇ ವಿಷಯದ ಬಗ್ಗೆ ಅಥವಾ ಪಟ್ಟಿಗೆ ಸಂಬಂಧಿಸಿದಂತೆ ತನ್ನ ನಿವೇದನೆಗಳು, ಆಕ್ಷೇಪಣೆಗಳು

ಅಥವಾ ಸಲಹೆಗಳನ್ನು ಲಿಖಿತದಲ್ಲಿ 3ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಪಟ್ಟಿಯ ಪ್ರಕಟಣೆಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸರ್ಕಾರಕ್ಕೆ ಸಲ್ಲಿಸಬಹುದು.

(2) ಸರ್ಕಾರವು, ಯಾವುದಾದರೂ ಮನವಿಗಳು, ಆಕ್ಷೇಪಣೆಗಳು ಮತ್ತು ಸೂಚನೆಗಳೇನಾದರೂ ಇದ್ದರೆ, ಅವುಗಳನ್ನು ಪರಿಗಣಿಸಿದ ನಂತರ ಮತ್ತು ತಾನು ಸೂಕ್ತವೆಂದು ಭಾವಿಸುವಂತಹ ವಿಚಾರಣೆಯನ್ನು ಮಾಡಿದ ನಂತರ, ಪಟ್ಟಿಯನ್ನು ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆಯೇ ಅನುಮೋದಿಸಬಹುದು.

(3) (2)ನೇ ಉಪ ಪ್ರಕರಣದ ಮೇರೆಗೆ ಪಟ್ಟಿಯನ್ನು ಅನುಮೋದಿಸಿದ ಸರ್ಕಾರದ ಆದೇಶವನ್ನು ಅನುಮೋದಿತ ಪಟ್ಟಿಯೊಂದಿಗೆ ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸತಕ್ಕುದು ಮತ್ತು ಅಂತಹ ಪ್ರಕಟಣೆಯು, ಪಟ್ಟಿಯಲ್ಲಿ ನಮೂದಿಸಲಾದ ವಿಷಯಗಳಿಗೆ ಸಂಬಂಧಪಟ್ಟ ವಿವರಗಳು ಪರಿಶೀಲನೆಗಾಗಿ ಸಾರ್ವಜನಿಕರಿಗೆ ಯಾವ ಸ್ಥಳದಲ್ಲಿ ಹಾಗೂ ಯಾವ ವೇಳೆಯಲ್ಲಿ ದೊರೆಯುತ್ತವೆ ಎಂಬುದನ್ನು ತಿಳಿಸತಕ್ಕುದು.

**5. ಹೊಸ ಜಮೀನುಗಳ ಸೇರ್ಪಡೆ.-** (1) ಸರ್ಕಾರವು, ಯಾವುದೇ ಸಮಯದಲ್ಲಿ ತಾನಾಗಿಯೇ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಅಥವಾ ಜಮೀನಿನಲ್ಲಿ ಆಸಕ್ತರಾದ ಯಾರೇ ವ್ಯಕ್ತಿಯ ಸೂಚನೆಯಂತೆ ಹೊಸ ಜಮೀನುಗಳನ್ನು ಪಟ್ಟಿಯಲ್ಲಿ ಸೇರಿಸಬಹುದು.

(2) ಅಂತಹ ಹೊಸ ಜಮೀನುಗಳನ್ನು ಸೇರ್ಪಡೆ ಮಾಡುವ ಮೊದಲು ಸರ್ಕಾರವು ಅಂತಹ ಸೇರ್ಪಡೆಯನ್ನು ಪ್ರಸ್ತಾವಿಸಿ ಒಂದು ಕರಡು ಅಧಿಸೂಚನೆಯನ್ನು, ಅಂತಹ ಕರಡನ್ನು ಯಾವ ದಿನಾಂಕದಂದು ಅಥವಾ ಯಾವ ದಿನಾಂಕದ ನಂತರ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು ಎಂಬುದನ್ನು ನಿರ್ದಿಷ್ಟಪಡಿಸುವ ನೋಟೀಸಿನೊಂದಿಗೆ, ನಿಯಮಿಸಲಾದ ನಮೂನೆಯಲ್ಲಿ ಪ್ರಕಟಿಸತಕ್ಕುದು ಮತ್ತು ಅಂತಹ ಕರಡಿನ ಬಗ್ಗೆ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಿಯಿಂದ ಅಥವಾ ಆಸಕ್ತರಾದ ಯಾರೇ ವ್ಯಕ್ತಿಯಿಂದ ಹಾಗೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು ಸ್ವೀಕರಿಸುವ ಯಾವುದೇ ಆಕ್ಷೇಪಣೆ ಅಥವಾ ಸೂಚನೆಯನ್ನು ಪರಿಗಣಿಸತಕ್ಕುದು.

**6. ಕೆಲವು ಸಂದರ್ಭಗಳಲ್ಲಿ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಬಳಕೆಯ ನಿಷೇಧ.-** 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಪ್ರಕಟವಾದ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಉದ್ಯಾನವನವನ್ನು, ಆಟದ ಮೈದಾನವನ್ನು ಅಥವಾ ಬಯಲು ಸ್ಥಳವನ್ನು ಈ ಅಧಿನಿಯಮ ಪ್ರಾರಂಭವಾದ ದಿನಾಂಕದಂದು ಅಂತಹ ಪ್ರದೇಶದಲ್ಲಿ ಯಾವ ಉದ್ದೇಶ ಅಥವಾ ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತೋ ಆ ಉದ್ದೇಶಕ್ಕಾಗಿ ಅಥವಾ ಉದ್ದೇಶಗಳಿಗೆ ಮಾತ್ರವಲ್ಲದೆ ಯಾವುದೇ ಇತರ ಉದ್ದೇಶಕ್ಕೆ ಬಳಸತಕ್ಕುದಲ್ಲ.

**7. ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ನಿರ್ವಹಣೆ.-** ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು, ಅದಕ್ಕೆ ಸೇರಿದ ಅಥವಾ ಅದರಲ್ಲಿ ನಿಹಿತವಾದ ಮತ್ತು 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಪ್ರಕಟಿತವಾದ ಪಟ್ಟಿಯಲ್ಲಿ ಸೇರಿರುವ ಎಲ್ಲ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳನ್ನು ಚೊಕ್ಕಟವಾಗಿ ಮತ್ತು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳತಕ್ಕುದು.

**8. ಕಟ್ಟಡಗಳ ನಿರ್ಮಾಣ, ಇತ್ಯಾದಿಗಳ ನಿಷೇಧ.-** (1) ಯಾರೇ ವ್ಯಕ್ತಿಯು, 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಪ್ರಕಟವಾದ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಉದ್ಯಾನವನದ, ಆಟದ ಮೈದಾನದ ಅಥವಾ ಬಯಲು ಸ್ಥಳದ ಬಳಕೆಗೆ ಬಾಧಕವಾಗಬಹುದಾದಂತಹ ಯಾವುದೇ ಕಟ್ಟಡದ ನಿರ್ಮಾಣ ಮಾಡತಕ್ಕುದಲ್ಲ ಅಥವಾ ಯಾವುದೇ ಉದ್ಯಾನವನದಲ್ಲಿ, ಆಟದ ಮೈದಾನದಲ್ಲಿ ಅಥವಾ ಬಯಲು ಸ್ಥಳದಲ್ಲಿ ಯಾವುದೇ ಒತ್ತುವರಿ ಮಾಡತಕ್ಕುದಲ್ಲ:

ಪರಂತು, ಕಾರ್ಯನಿರ್ವಹಣಾ ಪ್ರಾಧಿಕಾರವು, ನಿಯಮಿಸಬಹುದಾದಂತಹ ನಿಯಮಗಳಿಗೊಳಪಟ್ಟು, ಉದ್ಯಾನವನದ, ಆಟದ ಮೈದಾನದ ಅಥವಾ ಬಯಲು ಸ್ಥಳದ ಸುಧಾರಣೆಗಾಗಿ ಅಥವಾ ಅದರ ಹೆಚ್ಚಿನ ಅನುಕೂಲಕರ ಬಳಕೆಗಳಿಗಾಗಿ ಅವಶ್ಯವೆನಿಸಬಹುದಾದಂತಹ ಕಟ್ಟಡಗಳನ್ನು ನಿರ್ಮಾಣ ಮಾಡಲು ಅಥವಾ ಅಂತಹ ನಿರ್ಮಿತಿಗಳನ್ನು ರಚಿಸಲು ಅನುಮತಿಸಬಹುದು.

(2) 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಪ್ರಕಟಿಸಲಾದ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಉದ್ಯಾನವನದ, ಆಟದ ಮೈದಾನದ ಅಥವಾ ಬಯಲು ಸ್ಥಳದೊಳಗಿರುವ ಯಾವ ಜಮೀನನ್ನು ಅಥವಾ ಕಟ್ಟಡವನ್ನು ಮಾರಾಟದ, ಗುತ್ತಿಗೆಯ, ಕೊಡುಗೆಯ, ವಿನಿಮಯದ, ಅಡಮಾನದ ಮೂಲಕ ಅಥವಾ ಅನ್ಯಥಾ ಪರಭಾರೆ ಮಾಡತಕ್ಕುದಲ್ಲ ಮತ್ತು ಅಂತಹ ಯಾವುದೇ ಜಮೀನನ್ನು ಅಥವಾ ಕಟ್ಟಡಗಳನ್ನು ಯಾವುದೇ ಇತರ ಉದ್ದೇಶಕ್ಕಾಗಿ ಬಳಸಲು ಯಾವುದೇ ಲೈಸೆನ್ಸನ್ನು ಮಂಜೂರು ಮಾಡತಕ್ಕುದಲ್ಲ ಮತ್ತು ಈ ಪ್ರಕರಣವನ್ನು ಉಲ್ಲಂಘಿಸಿ ಯಾವುದೇ ಪರಭಾರೆ ಮಾಡಿದರೆ ಅಥವಾ ಲೈಸೆನ್ಸ್ ಮಂಜೂರು ಮಾಡಿದರೆ, ಅದು ಅನೂರ್ಜಿತವಾಗಿರತಕ್ಕುದು.

**9. ಉದ್ಯಾನವನಗಳ ಮತ್ತು ಆಟದ ಮೈದಾನಗಳ ಮಾಲೀಕರ ಕರ್ತವ್ಯ.-** ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗಿಲ್ಲದ, ಆದರೆ 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಪ್ರಕಟಿಸಲಾದ ಪಟ್ಟಿಯಲ್ಲಿ ಸೇರಿಸಲಾದ ಉದ್ಯಾನವನಗಳ ಮತ್ತು ಆಟದ ಮೈದಾನಗಳ ಸಂಬಂಧದಲ್ಲಿ , ಕಾರ್ಯನಿರ್ವಹಣಾ ಪ್ರಾಧಿಕಾರವು ನೋಟೀಸಿನ ಮೂಲಕ ಅಂತಹ ಉದ್ಯಾನವನದ ಅಥವಾ ಆಟದ ಮೈದಾನದ ಅಧಿಭೋಗದಲ್ಲಿರುವ ಮಾಲೀಕನನ್ನು ಅಥವಾ ವ್ಯಕ್ತಿಯನ್ನು ಅಥವಾ ಅಧಿಕಾರಿಯನ್ನು:-

(i) ಅಂತಹ ಉದ್ಯಾನವನವನ್ನು ಅಥವಾ ಆಟದ ಮೈದಾನವನ್ನು ಶುಚಿಯಾಗಿಡುವಂತೆ; ಅಥವಾ

(ii) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಯಾವುದೇ ಅಂತಹ ಉದ್ಯಾನವನದಲ್ಲಿ ಅಥವಾ ಆಟದ ಮೈದಾನದಲ್ಲಿ ಅಥವಾ ಅದರ ಮೇಲೆ ಯಾವುದೇ ಮುಂಚಾಚಿಕೆಯನ್ನು, ಒತ್ತುವರಿಯನ್ನು ಅಥವಾ ಅಡೆತಡೆಗಳನ್ನು ತೆಗೆದುಹಾಕುವಂತೆ ಅಥವಾ ಬದಲಿಸುವಂತೆ ಅಥವಾ ಕಾರ್ಯನಿರ್ವಾಹಕ ಅಧಿಕಾರಿಯು, ಅಂತಹ ಉದ್ಯಾನವನದಲ್ಲಿನ ಅಥವಾ ಆಟದ ಮೈದಾನದಲ್ಲಿನ ಯಾವುದೇ ಕಟ್ಟಡಕ್ಕೆ ಅವಶ್ಯಕವೆಂದು ಪರಿಗಣಿಸಬಹುದಾದಂತಹ ದುರಸ್ತಿಗಳನ್ನು ನಿರ್ವಹಿಸುವಂತೆ

– ಅಗತ್ಯಪಡಿಸಬಹುದು.

(2) ಅಧಿಭೋಗದಲ್ಲಿರುವ ಮಾಲೀಕನು ಅಥವಾ ವ್ಯಕ್ತಿಯು ಅಥವಾ ಪ್ರಾಧಿಕಾರವು, (1)ನೇ ಉಪ-ಪ್ರಕರಣದ ಮೇರೆಗೆ ನೋಟೀಸನ್ನು ಪಾಲಿಸಲು ತಪ್ಪಿದಲ್ಲಿ ಕಾರ್ಯನಿರ್ವಾಹಕ ಪ್ರಾಧಿಕಾರವು ತಾನೇ ಸ್ವತಃ ಈ ಮುಂದಿನವುಗಳಿಗಾಗಿ ವ್ಯವಸ್ಥೆ ಮಾಡತಕ್ಕುದು: –

(i) ಅಂತಹ ಉದ್ಯಾನವನವನ್ನು ಅಥವಾ ಆಟದ ಮೈದಾನವನ್ನು ಶುಚಿಯಾಗಿ ಮತ್ತು ಸರಿಯಾದ ಸ್ಥಿತಿಯಲ್ಲಿಡುವುದು; ಅಥವಾ

(ii) ಮುಂಚಾಚಿಕೆಯನ್ನು, ಒತ್ತುವರಿಯನ್ನು ಅಥವಾ ಅಡಚಣೆಯನ್ನು ತೆಗೆದು ಹಾಕುವುದು ಅಥವಾ ಬದಲಿಸುವುದು; ಅಥವಾ

(iii) ತಾನು ಅವಶ್ಯವೆಂದು ಪರಿಗಣಿಸಬಹುದಾದಂತಹ ದುರಸ್ತಿಗಳನ್ನು ನಿರ್ವಹಿಸುವುದು ಮತ್ತು ಅಂತಹ ನಿರ್ವಹಣೆಯ, ತೆಗೆದು ಹಾಕುವಿಕೆಯ, ಬದಲಾವಣೆಯ ಅಥವಾ ದುರಸ್ತಿಗಳ ವೆಚ್ಚವನ್ನು ಅಧಿಭೋಗದಲ್ಲಿರುವ ಮಾಲೀಕನಿಂದ ಅಥವಾ ವ್ಯಕ್ತಿಯಿಂದ ಅಥವಾ ಪ್ರಾಧಿಕಾರದಿಂದ ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ವಸೂಲು ಮಾಡತಕ್ಕುದು.

(3) ವೆಚ್ಚದ ಬಗೆಗೆ ಯಾವುದೇ ವಿವಾದಗಳಿದ್ದರೆ ಅದನ್ನು ಸರ್ಕಾರವು ತೀರ್ಮಾನಿಸತಕ್ಕುದು ಮತ್ತು ಅದರ ತೀರ್ಮಾನವೇ ಅಂತಿಮವಾಗಿರತಕ್ಕುದು.

(4) ಕಾರ್ಯನಿರ್ವಾಹಕ ಪ್ರಾಧಿಕಾರವು, (2)ನೇ ಉಪ-ಪ್ರಕರಣದಲ್ಲಿ ಸೂಚಿಸಿರುವಂತೆ ಕ್ರಮ ತೆಗೆದುಕೊಳ್ಳುವ ಬದಲು ಅಥವಾ ಅದರ ಜೊತೆಗೆ, ಭೂಮಿಯನ್ನು, ಉದ್ಯಾನವನವಾಗಿ ಅಥವಾ ಆಟದ ಮೈದಾನವಾಗಿ ಪರಿಣಾಮಕಾರಿಯಾಗಿ ವ್ಯವಸ್ಥೆಗೊಳಿಸುವ ಉದ್ದೇಶಕ್ಕಾಗಿ 1894 ರ ಭೂಸ್ವಾಧೀನ ಅಧಿನಿಯಮದ ಮೇರೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದುವರೆಯಬಹುದು.

**10. ವಾರ್ಷಿಕ ವಿವರಪಟ್ಟಿಯ ಸಲ್ಲಿಕೆ.-** ಕಾರ್ಯನಿರ್ವಾಹಕ ಅಧಿಕಾರಿಯು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಪರಿಮಿತಿಗಳೊಳಗಿರುವ ಮತ್ತು 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಪ್ರಕಟಿಸಲಾದ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಸಂಬಂಧದಲ್ಲಿ ವಾರ್ಷಿಕ ವಿವರಪಟ್ಟಿಯನ್ನು ನಿಗದಿಪಡಿಸಬಹುದಾದಂತಹ ನಮೂನೆಯಲ್ಲಿ ಮತ್ತು ಅಂತಹ ವಿವರಗಳೊಂದಿಗೆ ಕಮಿಷನರ್ ಮೂಲಕ ಸರ್ಕಾರಕ್ಕೆ ಸಲ್ಲಿಸತಕ್ಕದು. ವಿವರಪಟ್ಟಿಯ ಜೊತೆಗೆ 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಕ್ರಮಕೈಗೊಂಡ ಉದ್ಯಾನವನಗಳ ಮತ್ತು ಆಟದ ಮೈದಾನಗಳ ಪಟ್ಟಿ ಹಾಗೂ ಉದ್ಯಾನವನಗಳ ಮತ್ತು ಆಟದ ಮೈದಾನಗಳ ಸಂಬಂಧದಲ್ಲಿ ತೆಗೆದುಕೊಳ್ಳಲಾದ ಕ್ರಮದ ಸ್ವರೂಪ ಮತ್ತು ಅವುಗಳ ಸರಿಯಾದ ನಿರ್ವಹಣೆ ಕುರಿತಂತೆ ತೆಗೆದುಕೊಂಡ ಕ್ರಮಗಳ ವಿವರಗಳು ಇರತಕ್ಕದು.

**11. ದಂಡನೆಗಳು.–** 6ನೇ ಪ್ರಕರಣದ ಅಥವಾ 8ನೇ ಪ್ರಕರಣದ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ ಅಥವಾ 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಪ್ರಕಟವಾದ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯಾನವನದಲ್ಲಿ, ಆಟದ ಮೈದಾನದಲ್ಲಿ ಅಥವಾ ಬಯಲು ಸ್ಥಳದಲ್ಲಿ ಯಾವುದೇ ಕಸಕಡ್ಡಿಯನ್ನು ಎಸೆದರೆ, ಅವರು ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ದಂಡದಿಂದ ಅಥವಾ ಅವೆರಡರಿಂದಲೂ ದಂಡಿತರಾಗತಕ್ಕದು.

**12. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಕಂಪನಿಯನ್ನು ಮತ್ತು ಆ ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ಪ್ರಭಾರವನ್ನು ಹೊಂದಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವಲ್ಲಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ದೋಷಿಯೆಂದು ಭಾವಿಸತಕ್ಕದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದು:

ಪರಂತು, ಈ ಉಪ-ಪ್ರಕರಣದಲ್ಲಿರುವುದು ಯಾವುದೂ, ತನಗೆ ತಿಳಿಯದಂತೆ ಆ ಅಪರಾಧವು ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದಿಂದ ಸಂಭವಿಸಿತೆಂದು ರುಜುವಾತಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ದೋಷಿಯೆಂದು ಭಾವಿಸತಕ್ಕದು ಮತ್ತು ಅವನನ್ನು ವ್ಯವಹರಣೆಗೆ ಗುರಿಪಡಿಸತಕ್ಕದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕರು" ಎಂದರೆ, ಫರ್ಮಿನ ಪಾಲುದಾರರು.

**13. ನಿಯಂತ್ರಣ.–** (1) ಮುಖ್ಯ ನಿಯಂತ್ರಣಾ ಪ್ರಾಧಿಕಾರವು, ಕಾರ್ಯ ನಿರ್ವಾಹಕ ಪ್ರಾಧಿಕಾರಕ್ಕೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ನಂತರ, ಕಾರ್ಯ ನಿರ್ವಾಹಕ ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಥವಾ ಕಾರ್ಯನಿರ್ವಾಹಕ ಪ್ರಾಧಿಕಾರವು ನಿರ್ವಹಿಸಬೇಕಾಗಿದ್ದ ಈ ಅಧಿನಿಯಮದ ಮೇರೆಗಿನ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ವಿಫಲರಾಗಿದ್ದಾರೆಂದು ಅಭಿಪ್ರಾಯಪಟ್ಟರೆ, ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕೆ ಅಥವಾ ಈ ಅಧಿನಿಯಮದ ಮೇರೆಗೆ ಕಾರ್ಯನಿರ್ವಾಹಕ ಪ್ರಾಧಿಕಾರವು ನಿರ್ವಹಿಸಬೇಕಾಗಿದ್ದ ಯಾವುದೇ ಕೆಲಸವನ್ನು ನಿರ್ವಹಿಸಲು ಅವಶ್ಯವಿರುವ ಎಲ್ಲವನ್ನು ಮಾಡಲು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಆದೇಶಿಸಬಹುದು.

(2) ಈ ಪ್ರಕರಣದ ಉದ್ದೇಶಕ್ಕಾಗಿ, 1976ರ ಕರ್ನಾಟಕ ಪುರಸಭಾ ನಿಗಮಗಳ ಅಧಿನಿಯಮದ (1977 ರ ಕರ್ನಾಟಕ ಅಧಿನಿಯಮ 14) 94ನೇ, 96ನೇ ಮತ್ತು 97 ನೇ ಪ್ರಕರಣದ ಮೇರೆಗೆ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಲು, ತಪಾಸಣೆ ಮಾಡುವಂತೆ ಮಾಡಲು ಮತ್ತು ಅದರ ಆದೇಶಗಳನ್ನು ಜಾರಿಗೊಳಿಸಲು ವ್ಯಕ್ತಿಗಳನ್ನು ನೇಮಕ ಮಾಡಲು ಸರ್ಕಾರವು ಹೊಂದಿರುವ ಅಧಿಕಾರಗಳನ್ನೇ ಮುಖ್ಯ ನಿಯಂತ್ರಣಾ ಪ್ರಾಧಿಕಾರವೂ ಹೊಂದಿರತಕ್ಕುದು.

**14. ನಿಯಮ ರಚನಾಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಸರ್ಕಾರವು ಅಧಿಸೂಚನೆ ಮೂಲಕ ಮತ್ತು ಪೂರ್ವ ಪ್ರಕಟಣೆಯ ನಂತರ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು,–

(ಎ) ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಅಕ್ಕಪಕ್ಕದಲ್ಲಿ ವ್ಯಕ್ತಿಗಳ ಪ್ರವೇಶವನ್ನು ನಿಯಂತ್ರಿಸುವುದು ಅಥವಾ ಅವರ ವರ್ತನೆಯನ್ನು ಮಿತಿಗೊಳಿಸುವುದು;

(ಬಿ) ಪ್ರಾಣಿಗಳನ್ನು ಅಥವಾ ಯಾವುದೇ ವರ್ಗದ ಪ್ರಾಣಿಗಳನ್ನು ಯಾವುದೇ ಉದ್ಯಾನವನಗಳೊಳಗೆ, ಆಟದ ಮೈದಾನ ಅಥವಾ ಬಯಲು ಸ್ಥಳದೊಳಗೆ ಪ್ರವೇಶಿಸುವುದನ್ನು ನಿರ್ಬಂಧಿಸುವುದು ಅಥವಾ ನಿಷೇಧಿಸುವುದು;

(ಸಿ) ಯಾವ ಷರತ್ತುಗಳಿಗೆ ಒಳಪಟ್ಟು 8ನೇ ಪ್ರಕರಣದ ಮೇರೆಗೆ ಕಟ್ಟಡಗಳನ್ನು ನಿರ್ಮಿಸಲು ಅನುಮತಿಯನ್ನು ಕೊಡಬಹುದೋ ಆ ಷರತ್ತುಗಳು;

(ಡಿ) ಯಾವ ಕಾಲಾವಧಿಯವರೆಗೆ 10ನೇ ಪ್ರಕರಣದ ಮೇರೆಗೆ ವಾರ್ಷಿಕ ರಿಟರ್ನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದೆಯೋ ಆ ಕಾಲಾವಧಿ;

(ಇ) ಈ ಅಧಿನಿಯಮವು ಅಗತ್ಯಪಡಿಸುವ ಅಥವಾ ಅನುಮತಿಸುವ, ಗೊತ್ತುಪಡಿಸುವ ಎಲ್ಲಾ ವಿಷಯಗಳು

–ಇವುಗಳಿಗಾಗಿ ಉಪಬಂಧಿಸಬಹುದು.

(3) ಈ ಅಧಿನಿಯಮದ ಮೇರೆಗೆ ಮಾಡಲಾದ ಎಲ್ಲ ನಿಯಮಗಳ, ಹೊರಡಿಸಲಾದ ಎಲ್ಲ ಅಧಿಸೂಚನೆಗಳ ಮತ್ತು ಪ್ರಕಟಿಸಿದ ಎಲ್ಲ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ ಪಟ್ಟಿಗಳನ್ನು, ಅವುಗಳನ್ನು ರಚಿಸಿದ ಅಥವಾ ಪ್ರಕಟಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು

ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕುದು ಮತ್ತು ಸದರಿ ಅವಧಿಯು ಮುಗಿಯುವುದಕ್ಕೆ ಮುಂಚೆ, ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಯಾವುದೇ ನಿಯಮದಲ್ಲಿ, ಅಧಿಸೂಚನೆಯಲ್ಲಿ ಅಥವಾ ಪಟ್ಟಿಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ನಿಯಮದಲ್ಲಿ, ಅಧಿಸೂಚನೆಯಲ್ಲಿ ಅಥವಾ ಪಟ್ಟಿಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬಾರದೆಂದು ಅಥವಾ ಪಟ್ಟಿಯನ್ನು ಪ್ರಕಟಿಸಬಾರದೆಂದು ಉಭಯ ಸದನಗಳು ಒಪ್ಪಿದರೆ, ಅಂತಹ ನಿಯಮವು, ಅಧಿಸೂಚನೆಯು ಅಥವಾ ಪಟ್ಟಿಯು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕುದಲ್ಲ. ಆದಾಗ್ಯೂ, ಯಾವುದೇ ಅಂತಹ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ಅಧಿಸೂಚನೆಯ ಅಥವಾ ಪಟ್ಟಿಯ ಮೇರೆಗೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕುದಲ್ಲ.

**15. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಉದ್ಯಾನವನಗಳ, ಆಟದ ಮೈದಾನಗಳ ಮತ್ತು ಬಯಲು ಸ್ಥಳಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಅಧ್ಯಾದೇಶ, 1984 (1984 ರ ಕರ್ನಾಟಕ ಅಧ್ಯಾದೇಶ ಸಂ.19) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂತಹ ನಿರಸನವಿದ್ದಾಗ್ಯೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಎಂದು ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕುದು.

The above translation of the Karnataka Government-Parks, Play Fields and Open Spaces (Preservation and Regulation) Act, 1985 shall be authoritative text in the Kannada Language under section 5A of the Karnataka Official Language Act, 1963 (Karnataka Act No. 26 of 1963)

Bangalore
Date:

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಮ.ರಾ ಹೆಗಡೆ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

RKB